# ನಿನ್ನ ನಾಮವೆ ಎನಗೆ ಅಮೃತಾನ್ನವು

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 63.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 21.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 336.
4. **Note:** This kruti is not available in the books of Prof. S.K. Ramachandra Rao.
5. **Note:** Lyrics given without highlights are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are given separately in green highlights.
6. **Note:** As per my analysis, the lyrics as per Ref. 1 are more appropriate.
7. **Note:** Singer has followed these lyrics as in Ref. 3.

ರಾಗ: ಕೇದಾರಗೌಳ ತಾಳ: ಅಟ

ನಿನ್ನ ನಾಮವೆ ಎನಗೆ ಅಮೃತಾನ್ನವು
ಇನ್ನು ಹಸಿದಿರಲೇಕೆ ಎನಗೆ ನೀನೊಲಿದಿರಲು || ಪ ||

ಓಂಕಾರವೆಂಬ ನಾಮ ಉಪ್ಪು – ಉಪ್ಪಿನಕಾಯಿ
ಶಂಖಪಾಣಿಯ ನಾಮ ಪಾಕಾದಿ ಸೂಪ
ಸಂಕರ್ಷಣನ ನಾಮ ದಿವ್ಯ ಶಾಲ್ಯನ್ನವು
ಪಂಕಜಾಕ್ಷನ ನಾಮ ಪಳದ್ಯ ಬಗೆಬಗೆ ಸಾರು || ೧ ||

ಕೇಶವನೆಂಬ ನಾಮ ಕರಿದ ಹೂರಣಗಡಬು
ವಾಸುದೇವನ ನಾಮ ವಡೆ – ಶ್ಯಾವಿಗೆ
ಸಾಸಿರದ ನಾಮಗಳು ಸವಿಸವಿಯ ಪರಮಾನ್ನ
ದೋಷದೂರನ ನಾಮ ದೋಸೆ – ಸೂಸಲಗಡಬು || ೨ ||

ನಾರಾಯಣನ ನಾಮ ನೊರೆಹಾಲು ಸಕ್ಕರೆ
ಶ್ರೀರಾಮ ನಾಮ ಸರವಳಿ ಸಜ್ಜಿಗೆ
ಕಾರಣ್ಯನಿಧಿ ನಾಮ ಕರಿದ ಹಪ್ಪಳ – ಸಂಡಿಗೆ
ಪಾರಾಯಣನ ನಾಮ ಪರಿಪರಿಯ ಪಕ್ವಾನ್ನ || ೩ ||

ಯದುಪತಿಯೆಂಬ ನಾಮ ಎಣ್ಣೂರಿಗೆಯ ರಾಶಿ
ಮಧುಸೂದನನ ನಾಮ ಮಧುರ ಮಂಡಿಗೆಯು
ಚದುರಗೋವಳ ನಾಮ ಚೆಲುವ ಬೀಸೂರಿಗೆ
ಪದುಮನಾಭನ ನಾಮ ಪರಿಪರಿಯ ಭಕ್ಷ್ಯ || ೪ ||

ದೇವಕಿಸುತನ ನಾಮ ದಧ್ಯನ್ನದಾ ಮುದ್ದೆ
ಗೋವಿಂದನ ನಾಮ ಗುಳ್ಳೋರಿಗೆ
ಮಾವಮರ್ದನನ ನಾಮ ಕಲಸುಮೇಲೋಗರ
ರಾವಣಾರಿಯ ನಾಮ ಇಡ್ಡಲಿಗೆ – ಸುಖಿಯುಂಡೆ || ೫ ||

ಗರುಡವಾಹನನ ನಾಮ ಘೃತಪಯೋದಧಿತಕ್ರ
ಪರಮಪುರುಷನ ನಾಮ ಪನ್ನೀರ ಪಾನ
ಕರಿವರದ ನಿನ್ನ ನಾಮ ಕರ್ಪೂರದ ವೀಳ್ಯವು
ಶರಧಿಶಯನನ ನಾಮ ಶಯನಪರ್ಯಂಕ || ೬ ||

ಈ ಪರಿಯ ನಾಮಾವಳಿಯನು ಸವಿದುಂಡು
ಆಪತ್ತು ಬಿಡಿಸೆನ್ನ ಕ್ಷುಧೆಯ ನೂಕಿ
ಗೋಪಾಲ ಉರಗಾದ್ರಿ ಪುರಂದರವಿಠಲನ
ಶ್ರೀಪಾದವನೆ ನಂಬಿ ಅಪವರ್ಗ ಸೇರುವ || ೭ ||

**Note:** The lyrics given in green highlights are as per Ref. 3 and are slightly different.

ರಾಗ: ಕೇದಾರಗೌಳ ತಾಳ: ಅಟ

ನಿನ್ನ ನಾಮವೆ ಎನಗೆ ಅಮೃತಾನ್ನವು
ಇನ್ನು ಹಸಿದಿರಲೇಕೆ ಎನಗೆ ನೀನೊಲಿದಿರಲು || ಪ ||

ಓಂಕಾರವೆಂಬ ನಿನ್ನ ನಾಮ ಉಪ್ಪಿನಕಾಯಿ
ಶಂಖಪಾಣಿಯ ನಾಮ ಶಾಕಾದಿ ಸೂಪ
ಸಂಕರುಷಣ ಎಂಬ ನಾಮ ದಿವ್ಯ ಶಾಲ್ಯನ್ನವು
ಪಂಕಜಾಕ್ಷ ನಿನ್ನ ನಾಮ ಪಳದ್ಯ ಸಾರು || 1 ||

ಕೇಶವನೆಂಬ ನಾಮ ಕರಿದ ಹೂರಣ ಕಡುಬು
ವಾಸುದೇವನ ನಾಮ ವಡೆ ಶ್ಯಾವಿಗೆ
ಸಾಸಿರವೆಂಬ ನಾಮ ಶಾವಿಗೆ ಪರಮಾನ್ನ
ದೋಷದೂರನ ನಾಮ ಸೂಸಲ ಕಡುಬು || 2 ||

ನಾರಾಯಣ ನಿನ್ನ ನಾಮ ನೊರೆ ಹಾಲು ಸಕ್ಕರೆ
ಶ್ರೀ ರಾಮ ನಾಮ ಸರವಳಿಗೆ ಸಜ್ಜಿಗೆ
ಕಾರುಣ್ಯನಿಧಿ ನಾಮ ಕರಿದ ಹಪ್ಪಳ ಸಂಡಿಗೆ
ಪಾರಾಯಣ ನಾಮ ಪರಿ ಪರಿಯ ಪರಮಾನ್ನ || 3 ||

ಯದುಪತಿಯೆಂಬ ನಾಮ ಎಣ್ಣೋಳಿಗೆ ರಾಶಿ
ಮಧುಸೂದನನೆಂಬ ನಾಮ ಮಂಡಿಗೆಯು
ಚದುರ ಗೋವಳ ನಾಮ ಚೆಲುವ ಬೀಸೂರಿಗೆ
ಪದುಮನಾಭ ನಿನ್ನ ನಾಮ ಪರಿಪರಿಯ ಭಕ್ಷ್ಯ || 4 ||

ದೇವಕೀಸುತ ನಾಮ ದಧ್ಯನ್ನದ ಮುದ್ದೆ
ಗೋವಿಂದನ ನಾಮ ಗುಳ್ಳೋರಿಗೆ
ಮಾವಮರ್ದನ ನಾಮ ಕಲಸುಮೇಲೋಗರ
ರಾವಣಾರಿಯ ನಾಮ ದೋಸೆ ಸುಖಿನುಂಡೆ || 5 ||

ಗರುಡವಾಹನ ನಾಮ ಘೃತ ಪಯೋದಧಿ ತಕ್ರ
ಪರಮಪುರುಷನ ನಾಮ ಪನ್ನೀರು ಪಾನ
ಕರಿವರದ ನಿನ್ನ ನಾಮ ಕರ್ಪೂರದ ವೀಳ್ಯ
ಶರಧಿಶಯನ ನಾಮ ಶಯನಪರ್ಯಂಕ || 6 ||

ಈ ಪರಿಯ ನಾಮಾವಳಿಯನು ನೆರೆ ಸವಿದುಂಬೆ

ಆಪತ್ತು ಬಿಡಿಸೆನ್ನ ಕ್ಷುಧೆಯ ನೂಕಿ
ಗೋಪಾಲ ಉರಗಾದ್ರಿ ಪುರಂದರ ವಿಠಲನೆ
ಶ್ರೀಪಾದ ನಂಬಿ ಅಪವರ್ಗವ ಸೇರುವೆ || 7 ||

## ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಭಕ್ತನ ಹಸಿವೆಗೆ ಶ್ರೀಹರಿಯ ನಾಮವೇ ಒಂದು ಅಮೃತಾನ್ನ ಎಂದು ಹೇಳಿ ಒಂದೊಂದು ನಾಮವನ್ನು ಒಂದೊಂದು ಆಹಾರಪದಾರ್ಥಕ್ಕೆ ರೂಪಿಸಿ ಈ ಹಾಡಿನಲ್ಲಿ ಹೇಳಿದ್ದಾರೆ.

೧. **ಓಂಕಾರ** = ಎಲ್ಲ ಮಂತ್ರಗಳಿಗೂ ಮೂಲಮಂತ್ರ.
**ಶಂಖಪಾಣಿ** = ಶ್ರೀಹರಿ.
**ಶಾಕ** = ಪಲ್ಲೆ.
**ಸೂಪ** = ತೊವ್ವೆ.
**ಶಾಲ್ಯನ್ನ** = ಸಣ್ಣಕ್ಕಿಯ ಅನ್ನ.

೨. **ಸೊಸಲಗಡಬು** :— ಕೊಬ್ಬರಿಯ ಹರಕಲ ಮತ್ತು ಸಕ್ಕರೆ ಇವುಗಳನ್ನು ಕಣಕದ ಹಾಳೆಯಲ್ಲಿ ತುಂಬಿ ಕರಿದು ಮಾಡಿದ ಕಡಬು.

೩. **ಸರವಳಿ (ಸಾರವಳಿಗೆ)** = ಒಂದು ಜಾತಿಯ ಹೋಳಿಗೆ (ಹುರಿಯಕ್ಕಿ ಹೋಳಿಗೆ, ಪುಡೆಣ್ಣ ಹೋಳಿಗೆ).
**ಪಾರಾಯಣ** = ವೈಕುಂಠದಲ್ಲಿರುವವ.

೪. **ಎಣ್ಣೋರಿಗೆ** = ಕರಿದು ಮಾಡಿದ ಹೋಳಿಗೆ.

**ಬೀಸೂರಿಗೆ** = ಒಂದು ಜಾತಿಯ ಹೋಳಿಗೆ.

**ದಧ್ಯನ್ನದ ಮುದ್ದೆ** = ಬುತ್ತಿ.

**ಕಲಸುಮೇಲೋಗರ** = ಹುಳಿ ಕಲಿಸಿದ ಅನ್ನ.

**ಸುಖಿನುಂಡಿ** :— ಅರೆಸಿದ ಹೂರಣದಲ್ಲಿ ದ್ರಾಕ್ಷಿ ಮುಂತಾದವುಗಳನ್ನು ಕೂಡಿಸಿ, ಅಕ್ಕಿ ಬೇಳೆಗಳ ಹಿಟ್ಟಿನಿಂದ ಮಾಡಿದ ಕದಡಿನಲ್ಲಿ ಅದ್ದಿ ತುಪ್ಪದಲ್ಲಿ ಕರಿದು ಮಾಡಿದ ಭಕ್ಷ್ಯ.

**ಘೃತ** = ತುಪ್ಪ.

**ಪಯ** = ಹಾಲು.

**ದಧಿ** = ಮೊಸರು.

**ತಕ್ರ** = ಮಜ್ಜಿಗೆ.

**ಪನ್ನೀರ** = ಸುಗಂಧದ ನೀರಿನ.

**ಪರ್ಯಂಕ** = ಮಂಚ.

**ಉರಗಾದ್ರಿ** = ತಿರುಪತಿ.

**ಅಪವರ್ಗ** = ಮೋಕ್ಷ.

**Classification:** Keerthane
**Ankita:** purandara vittala
**Location:** NA
**Category:** Mahatmya Gnyana,
**Sub-Category:** Amruta, hasivu, om, shankha, sankarshana, divya, Narayana, keshava, Vasudeva, halu, sakkare, rama, karuna, Krishna, Vishnu, Devaki, govinda, kamsa, ravana, garuda, tuppa, niru, Samudra, mancha, Gopala, uraga, moksha, Tirupati,
**Pravachana:** NA
**Explanation:** NA